ಫ್ರೆಂಚ್‌ರಾಕ್ಸ್ ಸಬ್ ಡಿವೀಜ್.

ತಾರೀಖು 21ನೇ ಏಪ್ರೆಲ್ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವೀಜ್ ಮಂಡ್ಯ ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸಿ ಯಿರುವ ದಸ್ತಾವೇಜನ್ನ ಹಾಜರ್ಮಾಡಿದವರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಟ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜು ಹಾಜರಾದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ದಾದ ತಾರೀಖು.	ದಸ್ತಾವೇಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
165 1884—85	16—2—85	20—2—85	21—2—85	ಹೊನಗನಹಳ್ಳಿಯಲ್ಲಿ ಯಿರುವ ವಕ್ಕಲಿಗರ ಕರೀ ಚೌಡೇಗೌಡನ ಮಗ ಮರಿಚೌಡ	ಹೊನಗನಹಳ್ಳಿಯಲ್ಲಿರುವ ವಕ್ಕಲಿಗರ ಪುಟ್ಟೇಗೌಡ ತಂದೆ ಹೆಸರು ಚವುಡೇಗೌಡ	ಹೊನಗನಹಳ್ಳಿ ಗ್ರಾಮದಲ್ಲಿ ಬಂಜರಿಗೆ ಪಶ್ಚಿಮ ಗಿರಿಯನ ಹೊಲಕ್ಕೆ ಉತ್ತರ ಗಿರಿಯನ ಚನ್ನನ ಹೊಲಕ್ಕೆ ಪೂರ್ವ ಕಟ್ಟೆ ಯೀರಿಗೆ ದಕ್ಷಿಣ ಈ ಮಧ್ಯೆ ಇರುವ ನನ್ನ ಪಟ್ಟೆ ನಂಬರು 289ನೇ ಬನ್ನಿ ಕಟ್ಟೆ ಹೊಲ ಬೀಜವರೀ 0—0—4 ಕಂದಾಯ 0—9—4 ಯಿದನ್ನ (25–0–0) ರೂಪಾಯಿಗೆ ಆಧಾರ ಇದಕ್ಕೆ ಬಡ್ಡಿ ವರುಷ ವೊಂದಕ್ಕೆ ವರಹಾ 1ಕ್ಕೆ 2 ಹಣದ ಮೇರೆ ನಡದಪ್ಪ ದಿವಸಕ್ಕೆ ಬಡ್ಡೀಕೊಡುವದಾಗಿ.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನದ ಡಿಸ್ಟ್ರಿಕ್ಟ್.

1887—88ನೇ ಮುಂದಿನ ಸರ್ಕಾರಿ ಸಾಲಿನಲ್ಲಿ ಈಕೆಳಗೆ ನಮೂದು ಮಾಡಿರುವ ಜಂಗಲ್‌ಗಳಲ್ಲಿ ಹಾಲಿ ಕತರಾಯಿಸಿ ಬಿದ್ದಿರುವ 10,000 ಸಲಅಡಿ ಚೌಬೀನೆಯನ್ನು ಗಾಡಿ ಹೋಗುವ ಸ್ಥಳಕ್ಕೆ ಯೆಳದು ಅವಶ್ಯಕವಾದರೆ ಕುಯಿದು ಹಾಸನದ ಡಿಪೋಕ್ಕೆ ಹೇರುವದಕ್ಕೆ ಇದರ ಮೂಲಕ ದರಖಾಸ್ತುಗಳನ್ನು ಅಪೇಕ್ಷಿಸಲ್ಪಡುತ್ತವೆ.

ಕೆಂಪುಹೊಳೆ ಫಾಟಿ ಫಾರೆಸ್ಟ್. ಕಬ್ಬಿನಾಲೆ ಡಿಟೋ } ಮಂಜರಾಬಾದ್ ತಾಲ್ಲೂಕು.

2. ದರಖಾಸ್ತುಗಳು ನಾಟುಗಳನ್ನು ಯೆಳದು ಹಾಸನದಲ್ಲಿರುವ ಡಿಪೋಕ್ಕೆ ಹೇರುವ ಬಗ್ಯೆ ದರಖಾಸ್ತು ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ನಗದಾಗಿಯಾಗಲಿ, ಕರೆನ್ಸಿ ನೋಟಿನ ಮೂಲಕವಾಗಿಯಾಗಲಿ, ದರಖಾಸ್ತಿನೊಡನೆ 200 ರೂಪಾಯಿಗಳು ಕಳುಹಿಸಲ್ಪಟ್ಟಿ ಹೊರತು ಅನ್ಯಥಾ ಯಾವ ದರಖಾಸ್ತು ಅಂಗೀಕರಿಸಲ್ಪಡಲಾರದು.

4. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತುದಾರನು ಡಿಪೋಕ್ಕೆ ತಲಿಪಿಸಿ ಡಿಪೋ ಇಂಛಾರ್ಜ್ ನವುಕರನಿಂದ ತೆಗದುಕೊಳ್ಳಲ್ಪಟ್ಟ ಚೌಬೀನಿಗೆ ಕುಯಿದ ಮತ್ತು ಯೆಳದ ನಾಟಾಗಳಿಗೆ ಪ್ರತಿ ಸಲಅಡಿ 1ಕ್ಕೆ ಖಾಯಿಷ್ ಮಾಡುವ ಕಮ್ಮೀ ದರವನ್ನು ಪ್ರತ್ಯೇಕ ಪ್ರತ್ಯೇಕ ವಾಗಿ ನಮೂದಿಸತಕ್ಕದ್ದು.

5. ಡೆಪ್ಯುಟಿ ಕಮ್ಮಿಷನರವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಪುಳಿಸಿಕೊಂಡಿರುತ್ತಾರೆ. ಮತ್ತು ಹಾಂಗೆ ತಿರಸ್ಕರಿಸುವ ಬಗ್ಯೆ ಅವರು ಯಾವ ಕಾರಣವು ತಿಳಿಸಬೇಕಾದ್ದಿಲ್ಲವು.

6. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದು ವಾರದ ವಳಗಾಗಿ ತಕ್ಕ ಛಾಪಾ ಕಾಗದದಲ್ಲಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರದುಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮೇಣ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದು ಮಾಡಲ್ಪಟ್ಟ ದರಖಾಸ್ತುಗಳು ಇದರಿಂದ ರುಜು ಮಾಡಿರುವವರಿಂದ ಸ್ರ 1887ನೇ ಇಸವಿ ಮೇ ತಾರೀಖು 31ರ ವರಿಗೆ ತೆಗದುಕೊಳ್ಳಲ್ಪಡುವದು.

9. ಕಂಟ್ರಾಕ್ಟು ಷರತ್ತುಗಳನ್ನು ಕುರಿತು ಯಾ ಇತರ ವಿಷಯಕವಾದ ವಿಶೇಷ ತಪಸೀಲ್‌ಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 5ನೇ ಏಪ್ರೆಲ್ 1887.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಶೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾಲೀಕರಾಗಲೀ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್‌ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಯೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು 11ನೇ ಸಂಪುಟ ನಂಬರ್ 35 1884—85 ಯಡೇಹಳ್ಳಿ ಸಬ್ ರಿಜಿಸ್ಟ್ರಾರ್.	ಕೊಪ್ಪ ತಾಲ್ಲೂಕು ಮುಡಬೂರ ಮಾಗಣಿಕು ಚಬ್ಬೆಗ್ರಾಮದಲ್ಲಿ ಇರುವ ಕಾಳೇಗೌಡನ ಮಗ ತಮ್ಮಯ್ಯಗೌಡ	ತೀರ್ಥಹಳ್ಳಿ ತಾಲ್ಲೂಕು ಮೂಳೂರು ಮಾಗಣಿ ಕುದೂರು ಗ್ರಾಮದಲ್ಲಿರುವ ಶೇಷಯ್ಯಗೌಡರ ಮಗ ಮಾನಪ್ಪಗೌಡರಿಗೆ	29ನೇ ಜನವರೀ 1885ನೇ ಇಸವಿ	29ನೇ ಜನವರೀ 1885ನೇ ಇಸವಿ	ಚಬ್ಬೆನಾಡುಗ್ರಾಮದಲ್ಲಿರತಕ್ಕ ಸ್ವತ್ತುಗಳು. 1 ಖಾನೆಷುಮಾರಿ ನಂಬರ್ 111ನೇ ತಖ್ತುಪೋಷ್ ಹಾಕಿದ ಹಂಚಿನ ಮನೆ 1ಕ್ಕೆ 13 ಅಂಕಣದ ಬಾಬತು. 2. ಸರ್ವೆ ನಂಬರ್ 169ನೇ ಕಾಫೀ ತೋಟ ಯಕರೆ 1–20 ಆಕಾರ 0–12–0 3. ಸರ್ವೆ ನಂ. 170ನೇ ಬಾಗಾಯತು ಯಕರೆ 3–37 ಆಕಾರ 24–0–0 4. ಸರ್ವೇ ನಂ. 172ನೇ ಪೈಕಿ ತರೀ ಯಕರೆ 8–4 ಆಕಾರ 23–4–0. 5. ಸರ್ವೆ ನಂ. 201ನೇ ತರೀ ಯಕರೆ 5–2 ಆಕಾರ 14–0–0 6. ಸರ್ವೆ ನಂ. 191ನೇ ಖುಷ್ಕಿ ಯಕರೆ 14–4 ಆಕಾರ 5–8–0 ಕುಟುಂಬ ಸಂರಕ್ಷಣೆಗೋಸ್ಕರ ನಡಿಸಿದ ಲೇವಾದೇವಿ ಬಾಬತು 400 ರೂಪಾಯಿ ಸಲ್ಲಬೇಕಾದ್ದಕ್ಕೆ 4 ವರುಷ ಕಂತಿನಿಂದ ಕೊಡುವದಾಗಿಯೂ ಇದಕ್ಕೆ ಮೇಲ್ಕಂಡ ಸೊತ್ತುಗಳು ದೀಡು ಮಾಡಿರುವದಾಗಿ ಒರ ಕೊಟ್ಟ ಪತ್ರ.